# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 526 |
| ಸದಸ್ಯರ ಹೆಸರು | ಶ್ರೀಮತಿ ಉಮಾಶ್ರೀ<br>(ನಾಮ ನಿರ್ದೇಶನ ಹೊಂದಿರುವರು) |
| ಉತ್ತರಿಸುವ ದಿನಾಂಕ | 19-07-2024 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕೃಷಿ ಭೂಮಿಯಲ್ಲಿ ಹೆಚ್ಚುತ್ತಿರುವ ರಾಸಾಯನಿಕ ರಸಗೊಬ್ಬರಗಳ ಬಳಕೆ ಏಕ ರೀತಿಯ ಬೆಳೆ ಪದ್ಧತಿ, ತ್ಯಾಜ್ಯವನ್ನು ಸುಡುವುದು ಹಾಗೂ ಕಾಂಪೊಸ್ಟ್ ಗೊಬ್ಬರದ ಬಗ್ಗೆ ನಿರ್ಲಕ್ಷಿಸುತ್ತಿರುವುದಂದಾಗಿ ಫಲವತ್ತತೆ ಕಳೆದು ಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಜ್ಯದ ಕೃಷಿ ಭೂಮಿಯಲ್ಲಿ ಹೆಚ್ಚುತ್ತಿರುವ ರಾಸಾಯನಿಕ ರಸಗೊಬ್ಬರಗಳ ಬಳಕೆ, ಏಕ ರೀತಿಯ ಬೆಳೆ ಪದ್ಧತಿ, ತ್ಯಾಜ್ಯವನ್ನು ಸುಡುವುದು ಹಾಗೂ ಸಾವಯವ ಗೊಬ್ಬರದ ಬಗ್ಗೆ ನಿರ್ಲಕ್ಷಿಸುತ್ತಿರುವುದಿಂದಾಗಿ ಫಲವತ್ತತೆ ಕಳೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಮಣ್ಣಿನ ಫಲವತ್ತತೆಯನ್ನು ಉತ್ತಮಪಡಿಸುವ ಸಲುವಾಗಿ ಬೆಳೆ ಪರಿವರ್ತನೆ, ಕೃಷಿ ತ್ಯಾಜ್ಯಗಳನ್ನು ಸುಡದೇ ಮಣ್ಣಿಗೆ ಸೇರಿಸುವುದು, ಅವೈಜ್ಞಾನಿಕ & ಅನಾವಶ್ಯಕ ರಸಗೊಬ್ಬರಗಳ ಬಳಕೆಯನ್ನು ತಗ್ಗಿಸಿ ಪರ್ಯಾಯ/ಸಾವಯವ ಗೊಬ್ಬರಗಳ ಬಳಕೆ ಬಗ್ಗೆ ರೈತರಿಗೆ ತರಬೇತಿ ಮತ್ತು ಪ್ರಾತ್ಯಕ್ಷಿಕೆಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ.<br><br>ಮಣ್ಣಿನಲ್ಲಿ ಸಾವಯವ ಅಂಶವನ್ನು ಹೆಚ್ಚಿಸುವ ಅತ್ಯವಶ್ಯಕತೆಯಿದ್ದು, ಮಣ್ಣಿನ ಆರೋಗ್ಯವನ್ನು ಕಾಪಾಡಿಕೊಂಡು ಉತ್ಪಾದನಾ ವೆಚ್ಚವನ್ನು ಕಡಿತಗೊಳಿಸುವ ಮೂಲಕ ಕೃಷಿಯನ್ನು ಲಾಭದಾಯಕವಾಗಿ ಮಾಡಿ ರೈತರ ಜೀವನಮಟ್ಟವನ್ನು ಸುಧಾರಿಸುವ ಸಲುವಾಗಿ, ಇಲಾಖಾವತಿಯಿಂದ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>**ಸಾವಯವ ಇಂಗಾಲ ಅಭಿಯಾನ ಕಾರ್ಯಕ್ರಮ**:<br>ಸದರಿ ಯೋಜನೆಯಡಿ ಹಸಿರೆಲೆ ಗೊಬ್ಬರ ಬೀಜಗಳನ್ನು ಶೇ.75ರ ರಿಯಾಯಿತಿ ದರದಲ್ಲಿ, ಎಲ್ಲಾ ವರ್ಗದ ರೈತರಿಗೆ, ರೈತ ಸಂಪರ್ಕ ಕೇಂದ್ರಗಳ ಮೂಲಕ ವಿತರಿಸಲಾಗುತ್ತಿದೆ<br><br>**ಕೇಂದ್ರ ಪುರಸ್ಕೃತ ಯೋಜನೆಗಳಾದ ಆಹಾರ ಮತ್ತು ಪೌಷ್ಠಿಕ ಭದ್ರತೆ (FNS) ಮತ್ತು ರಾಷ್ಟ್ರೀಯ ಖಾದ್ಯತೈಲ ಅಭಿಯಾನ (NMEO)**<br>ಸದರಿ ಯೋಜನೆಯಡಿ ಶೇ.50ರ ರಿಯಾಯಿತಿ ದರದಲ್ಲಿ ಎರೆಹುಳು ಗೊಬ್ಬರ, ಸಾವಯವ ಗೊಬ್ಬರ (ಆರ್ಗಾನಿಕ್ ಮೆನ್ಯೂರ್), ರಂಜಕಯುಕ್ತ ಸಾವಯವ ಗೊಬ್ಬರ (PROM), ಖಾದ್ಯವಲ್ಲದ ಎಣ್ಣೆ ರಹಿತ ಹಿಂಡಿ ಗೊಬ್ಬರ, ಸಿಟಿ ಕಾಂಪೋಸ್ಟ್ |

| | | |
|---|---|---|
| | | (BULK SUPPLY) ಮತ್ತು ಹಸಿರೆಲೆ ಗೊಬ್ಬರ ಬೀಜಗಳು ಮತ್ತು ಜೈವಿಕ ಗೊಬ್ಬರಗಳನ್ನು ರೈತ ಸಂಪರ್ಕ ಕೇಂದ್ರಗಳ ಮೂಲಕ ರೈತರಿಗೆ ಒದಗಿಸಿ, ಮಣ್ಣಿನ ಸಾವಯವ ಅಂಶವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>• PM-PRANAM (PM Programme for Restoration, Awareness Generation, Nourishment and Amelioration of Mother-Earth) Scheme: ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ತಗ್ಗಿಸಿ, ಪರ್ಯಾಯ ಗೊಬ್ಬರಗಳಾದ ಸಾವಯವ/ಜೈವಿಕ ಗೊಬ್ಬರ ಮತ್ತು ನ್ಯಾನೋ ಗೊಬ್ಬರಗಳ ಬಳಕೆ, ನೈಸರ್ಗಿಕ/ಸಾವಯವ ಕೃಷಿಯನ್ನು ಉತ್ತೇಜಿಸಲು ಹಾಗೂ ಸಂರಕ್ಷಣಾ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರವು ಈ ಯೋಜನೆಯನ್ನು ಜಾರಿಗೆ ತಂದಿರುತ್ತದೆ.<br>• GOBAR-DHAN(Galvanizing Organic Bio Agro Resources-Dhan) Scheme: ಕೇಂದ್ರ ಸರ್ಕಾರದ ಈ ಯೋಜನೆಯಡಿ ಸಾವಯವ ಗೊಬ್ಬರಗಳ ಉತ್ಪಾದನೆಯನ್ನು ಹೆಚ್ಚಿಸಲು Fermented Organic Manure/Liquid Fermented Organic Manure(FOM/LFOM) ಮತ್ತು Phosphate Rich Organic Manure(PROM) ಉತ್ಪಾದಕರಿಗೆ ರೂ.1500/- ಪ್ರತಿ ಟನ್‌ಗೆ ಮಾರುಕಟ್ಟೆ ಅಭಿವೃದ್ಧಿ ನೆರವನ್ನು ನೀಡಲಾಗುತ್ತಿದೆ. |
| ಆ) | 1970ರ ದಶಕದಲ್ಲಿ ರಾಜ್ಯದ ಭೂಮಿಯನ್ನು ಶೇ.1% ರಷ್ಟಿದ್ದ ಸಾವಯವ ಇಂಗಾಲದ ಪ್ರಮಾಣ ಈಗ ಶೇ.0.32% ರಷ್ಟಾಗಿದ್ದು, ಇದಕ್ಕೆ ಮೂಲ ಕಾರಣಗಳು ಯಾವುವು; ಸಾವಯವದ ಇಂಗಾಲಯದ ಪ್ರಮಾಣದಲ್ಲಿ ಇಳಿಕೆ ಕಂಡಿರುವ ರಾಜ್ಯದ ಜಿಲ್ಲೆಗಳು ಯಾವುವು; | ಬೆಳೆ ಪರಿವರ್ತನೆ ಮಾಡದೇ ಏಕ ಬೆಳೆ ಪದ್ಧತಿಯನ್ನು ಅನುಸರಿಸುತ್ತಿರುವುದು, ಹೆಚ್ಚು ಹೆಚ್ಚು ಸಾವಯವ ಗೊಬ್ಬರಗಳನ್ನು ಮಣ್ಣಿಗೆ ಸೇರಿಸುತ್ತಿಲ್ಲದಿರುವುದು, ಕೃಷಿ ತ್ಯಾಜ್ಯಗಳನ್ನು ಮಣ್ಣಿಗೆ ಸೇರಿಸದೆ ಸುಡುತ್ತಿರುವುದು, ಅರಣ್ಯಗಳ ನಾಶ, ಅವೈಜ್ಞಾನಿಕ & ಅನಾವಶ್ಯಕ ರಸಗೊಬ್ಬರಗಳ ಬಳಕೆ ಹಾಗೂ ಮಣ್ಣಿನ ಸವಕಳಿಯನ್ನು ತಡೆಯದಿರುವುದು ಮಣ್ಣಿನಲ್ಲಿ ಸಾವಯವ ಇಂಗಾಲ ಅಂಶ ಕಡಿಮೆಯಾಗಲು ಮೂಲ ಕಾರಣಗಳಾಗಿರುತ್ತವೆ.<br><br>ಸಾವಯವ ಇಂಗಾಲದ ಪ್ರಮಾಣದಲ್ಲಿ ಇಳಿಕೆ ಕಂಡುಬಂದಿರುವ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಇ) | ರಾಜ್ಯದಲ್ಲಿ ರಸಾಯನಿಕ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಿರುವ ಕಂಪನಿಗಳು ಯಾವುವು; ಈ ಕಂಪನಿಯ ಒಳ್ಳೆಯ ಗುಣಮಟ್ಟದಲ್ಲದ ಉತ್ಪನ್ನಗಳಿಂದಾಗಿ ರೈತರ ಕೃಷಿ ಭೂಮಿಯ ಫಲವತ್ತತೆ ಕಳೆದುಕೊಂಡು ಉತ್ತಮ | ರಾಜ್ಯದಲ್ಲಿ ಕೇಂದ್ರ ಸರ್ಕಾರದ ಸಹಾಯಧನಕ್ಕೆ ಒಳಪಡುವ ರಾಸಾಯನಿಕ ರಸಗೊಬ್ಬರಗಳನ್ನು ಮಾರಾಟ ಮಾಡುತ್ತಿರುವ ಕಂಪನಿಗಳ ವಿವರಗಳು ಈ ಕೆಳಕಂಡಂತಿದೆ:<br>1. ಮೆ. ಮಂಗಳೂರು ಕೆಮಿಕಲ್ಸ್ & ಫರ್ಟಿಲೈಸರ್ಸ್ ಲಿಮಿಟೆಡ್ (ಎಂಸಿಎಫ್),<br>2. ಮೆ. ಕೋರಮಂಡಲ್ ಇಂಟರ್ ನ್ಯಾಷನಲ್ ಲಿಮಿಟೆಡ್,<br>3. ಮೆ. ಇಂಡಿಯನ್ ಪೊಟ್ಯಾಶ್ ಲಿಮಿಟೆಡ್ (ಐಪಿಎಲ್), |

| | | |
|---|---|---|
| | ಇಳುವರಿ ಪಡೆಯುವಲ್ಲಿ ವಿಫಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹ ಯಾವ ಯಾವ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | 4. ರಾಷ್ಟ್ರೀಯ ಕೆಮಿಕಲ್ಸ್ & ಫರ್ಟಿಲೈಸರ್ಸ್ ಲಿಮಿಟೆಡ್ (ಆರ್ ಸಿ ಎಫ್)<br>5. ಮೆ. ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ಸ್ ಕಾರ್ಪೋರೇಷನ್ ಲಿಮಿಟೆಡ್ (ಇಫ್ಕೋ),<br>6. ಮೆ. ಗುಜರಾತ್ ಸ್ಟೇಟ್ ಫರ್ಟಿಲೈಸರ್ಸ್ & ಕೆಮಿಕಲ್ಸ್ ಲಿಮಿಟೆಡ್ (ಜಿಎಸ್ಎಫ್ ಸಿ),<br>7. ಮೆ. ಕ್ರಿಷಕ್ ಭಾರತಿ ಕೋಆಪರೇಟಿವ್ ಲಿಮಿಟೆಡ್ (ಕ್ರಿಬ್ಕೊ),<br>8. ಮೆ. ಮಹಾಧನ್ ಅಗ್ರಿ ಟೆಕ್ ಲಿಮಿಟೆಡ್ (ಸ್ಮಾರ್ಟ್ ಕೆಮ್ ಟೆಕ್ನ ಲಾಜೀಸ್ ಲಿ.),<br>9. ಮೆ. ಫರ್ಟಿಲೈಸರ್ಸ್ & ಕೆಮಿಕಲ್ಸ್ ಟ್ರಾವೆನ್ಕೋರ್ ಲಿಮಿಟೆಡ್ (ಫ್ಯಾಕ್ಟ್),<br>10. ಮೆ. ನ್ಯಾಷನಲ್ ಫರ್ಟಿಲೈಸರ್ಸ್ ಲಿಮಿಟೆಡ್ (ಎನ್ ಎಫ್ ಎಲ್),<br>11. ಮೆ. ನರ್ಮದ ಬಯೋಕೆಮ್ ಲಿ,<br>12. ಮೆ. ಪ್ಯಾರಾದೀಪ್ ಫಾಸ್ಫೇಟ್ಸ್ (ಪಿಪಿಎಲ್)/(ಮೆ. ಜುವಾರಿ ಅಗ್ರೋ ಕೆಮಿಕಲ್ಸ್ ಲಿಮಿಟೆಡ್ (ಜೆಡ್ಎಸಿಎಲ್))<br>13. ಮೆ. ಮೊಸ್ಯಾಕ್ ಇಂಡಿಯಾ ಲಿಮಿಟೆಡ್,<br>14. ಮೆ. ಗ್ರೀನ್ ಸ್ಟಾರ್ ಫರ್ಟಿಲೈಸರ್ಸ್ ಲಿಮಿಟೆಡ್ (ಜಿಎಫ್ ಎಲ್)/ಮೆ. ಸೌತರ್ನ್ ಪೆಟ್ರೊಕೆಮಿಕಲ್ಸ್ ಇಂಡಸ್ಟ್ರೀಸ್ ಕಾರ್ಪೋರೇಷನ್ (ಸ್ಪಿಕ್)<br>15. ಮೆ. ಮದ್ರಾಸ್ ಫರ್ಟಿಲೈಸರ್ಸ್ ಲಿಮಿಟೆಡ್ (ಎಂಎಫ್ ಎಲ್)<br>16. ಮೆ. ನಾಗಾರ್ಜುನ ಫರ್ಟಿಲೈಸರ್ಸ್ & ಕೆಮಿಕಲ್ಸ್ (ಎನ್ ಎಫ್ ಸಿಎಲ್)<br>ಸದರಿ ಕಂಪನಿಗಳ ಗುಣಮಟ್ಟವಲ್ಲದ ಉತ್ಪನ್ನಗಳಿಂದಾಗಿ ಕೃಷಿ ಭೂಮಿಯ ಫಲವತ್ತತೆ ಕಳೆದುಕೊಂಡು ರೈತರು ಉತ್ತಮ ಇಳುವರಿ ಪಡೆಯಲು ವಿಫಲರಾಗಿದ್ದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br>ಮುಂದುವರೆದು, ರೈತರಿಗೆ ಉತ್ತಮ ಗುಣಮಟ್ಟದ ರಸಗೊಬ್ಬರ ದೊರಕುವುದನ್ನು ಖಾತರಿಪಡಿಸಲು ಗುಣನಿಯಂತ್ರಣ ಕಾರ್ಯಕ್ರಮದಡಿ ಗ್ರೇಡ್ ವಾರು ರಸಗೊಬ್ಬರ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆಗೆ ಒಳಪಡಿಸಲು ರಸಗೊಬ್ಬರ ಪರಿವೀಕ್ಷಕರಿಗೆ ಗುರಿ ನಿಗಧಿ ಪಡಿಸಲಾಗಿರುತ್ತದೆ. ವಿಶ್ಲೇಷಣೆಯಲ್ಲಿ ಕಳಪೆ ಎಂದು ವರದಿಯಾಗುವ ರಸಗೊಬ್ಬರ ಮಾರಾಟಗಾರರು/ ಉತ್ಪಾದಕರ ವಿರುದ್ಧ ರಸಗೊಬ್ಬರ (ನಿಯಂತ್ರಣ) ಆದೇಶ, 1985 ರನ್ವಯ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| ಈ) | ರಾಜ್ಯದ ರೈತರಲ್ಲಿ ಸಾವಯವ ಕೃಷಿ ವ್ಯವಸಾಯದ ಬಗ್ಗೆ ಅರಿವು ಮಾಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು) | ಸರ್ಕಾರದಿಂದ ಸಾವಯವ ಕೃಷಿ ಅಳವಡಿಸಿಕೊಳ್ಳಲು ರೈತರಿಗೆ ಅರಿವು ಮೂಡಿಸಲು ಯೋಜಿಸಲಾಗಿರುವ ಕಾರ್ಯಕ್ರಮಗಳು:<br>ಇಲಾಖೆಯ ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳ ಮೂಲಕ ಸಾವಯವ ಕೃಷಿ ಅವಶ್ಯಕತೆ ಮತ್ತು ಮಹತ್ವ ಕುರಿತು ರೈತರಿಗೆ ಆನ್‌ಲೈನ್ ಹಾಗೂ ಸಾಂಸ್ಥಿಕ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. ಮುಂದುವರೆದು, ಪ್ರಗತಿಪರ ಸಾವಯವ ಕೃಷಿಕರ ಮತ್ತು ಮಾದರಿ ಸಾವಯವ ಕ್ಷೇತ್ರಗಳ ಭೇಟಿ ಮಾಡಿಸಿ ಅನುಭವ ಹಂಚಿಕೆ ಮಾಡಿಸುವುದರ ಮೂಲಕ ರೈತರಿಗೆ ಅರಿವು ಮೂಡಿಸಲಾಗುತ್ತಿದೆ.<br><br>ಇಲಾಖೆಯ ವಿವಿಧ ಕಾರ್ಯಕ್ರಮಗಳು, ಆಕಾಶವಾಣಿ, ದೂರದರ್ಶನ, ಜಿಲ್ಲಾ/ರಾಜ್ಯ ಮಟ್ಟದ ಸಾವಯವ ಮತ್ತು ಸಿರಿಧಾನ್ಯ ಕಾರ್ಯಾಗಾರ/ರಾಷ್ಟ್ರೀಯ & ಅಂತರರಾಷ್ಟ್ರೀಯ ಮೇಳಗಳು/ವಸ್ತು ಪ್ರದರ್ಶನಗಳ ಮೂಲಕ ರಾಜ್ಯದ ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸಂಪರ್ಕ ಒದಗಿಸಿಕೊಡುವ ನಿಟ್ಟಿನಲ್ಲಿ ಹಾಗು ರೈತರು, ಗ್ರಾಹಕರು ಮತ್ತು ಇತರೆ ಪಾಲುದಾರರಲ್ಲಿ ಅರಿವು ಮೂಡಿಸಲಾಗುತ್ತಿದೆ.<br><br>ಸಾವಯವ ಇಂಗಾಲ ಅಭಿಯಾನ ಕಾರ್ಯಕ್ರಮದಡಿ ಆಯ್ದ ರೈತರಿಗೆ ಪ್ರತಿ ಹೆಕ್ಟೇರ್‌ಗೆ ಗರಿಷ್ಠ ರೂ.2500/-ಗಳ ಮೌಲ್ಯದ ಹಸಿರೆಲೆ ಗೊಬ್ಬರ ಬೀಜಗಳನ್ನು ನೀಡುವುದರ ಮೂಲಕ ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಿಸುವ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗುತ್ತಿದೆ.<br><br>ಸಾವಯವ ಕೃಷಿ ನೀತಿಯಡಿ ಸಾವಯವ ಕೃಷಿಯನ್ನು ಉತ್ತೇಜಿಸಲು ಸಾವಯವ ಸಿರಿ/ಮಾದರಿ ಸಾವಯವ ಗ್ರಾಮ/ಸ್ಥಳಗಳ ಸ್ಥಾಪನೆ/ಸಾವಯವ ಕೃಷಿ ಮಿಷನ್, ಸಾವಯವ ಭಾಗ್ಯ ಮುಂತಾದ ಕಾರ್ಯಕ್ರಮಗಳಡಿ ತರಬೇತಿ, ಸಾಮರ್ಥ್ಯಾಭಿವೃದ್ಧಿ, ಅಧ್ಯಯನ ಪ್ರವಾಸ ಹಾಗೂ ಕ್ಷೇತ್ರೋತ್ಸವಗಳನ್ನು ಆಯೋಜಿಸಲಾಗಿರುತ್ತದೆ. |

ಸಂಖ್ಯೆ: AGRI/146/ACT/2024

**(ಎನ್. ಚಲುವರಾಯಸ್ವಾಮಿ)**
ಕೃಷಿ ಸಚಿವರು

## ಅನುಬಂಧ (LCQ 526)

## ಶೇಕಡಾರು ಆಧಾರದಲ್ಲಿ ಕಡಿಮೆ ಸಾವಯವ ಇಂಗಾಲದ ಜಿಲ್ಲಾವಾರು ವಿವರ

| ಕ್ರ. ಸಂ | ಜಿಲ್ಲೆ | ವಿಶ್ಲೇಷಿಸಲಾದ ಮಣ್ಣು ಮಾದರಿಗಳು | ಸಾವಯವ ಇಂಗಾಲ ಶೇ. 0.5 ಗಿಂತ ಕಡಿಮೆ ಇರುವ ಮಣ್ಣು ಮಾದರಿಗಳು | ಶೇ. |
|---|---|---|---|---|
| 1 | ಬಾಗಲಕೋಟೆ | 66684 | 28639 | 42.95 |
| 2 | ಬೆಂಗಳೂರು ಗ್ರಾ | 14045 | 10826 | 77.08 |
| 3 | ಬೆಳಗಾವಿ | 133410 | 93409 | 70.02 |
| 4 | ಬಳ್ಳಾರಿ | 83268 | 30459 | 36.58 |
| 5 | ಬೆಂಗಳೂರು ನಗರ | 7164 | 4330 | 60.45 |
| 6 | ಬೀದರ್ | 58971 | 23893 | 40.52 |
| 7 | ವಿಜಯಪುರ | 84153 | 50500 | 60.01 |
| 8 | ಚಾಮರಾಜನಗರ | 29380 | 23472 | 79.89 |
| 9 | ಚಿಕ್ಕಬಳ್ಳಾಪುರ | 32355 | 15845 | 48.97 |
| 10 | ಚಿಕ್ಕಮಗಳೂರು | 37456 | 9650 | 25.76 |
| 11 | ಚಿತ್ರದುರ್ಗ | 60085 | 31366 | 52.20 |
| 12 | ದಕ್ಷಿಣ ಕನ್ನಡ | 26151 | 1697 | 6.49 |
| 13 | ದಾವಣಗೆರೆ | 35154 | 14913 | 42.42 |
| 14 | ಧಾರವಾಡ | 23269 | 20617 | 88.60 |
| 15 | ಗದಗ | 48600 | 41790 | 85.99 |
| 16 | ಕಲಬುರ್ಗಿ | 95599 | 40521 | 42.39 |
| 17 | ಹಾಸನ | 99537 | 42001 | 42.20 |
| 18 | ಹಾವೇರಿ | 51842 | 40694 | 78.50 |
| 19 | ಕೊಡಗು | 50537 | 23378 | 46.26 |
| 20 | ಕೋಲಾರ | 29214 | 27657 | 94.67 |
| 21 | ಕೊಪ್ಪಳ | 52013 | 41310 | 79.42 |
| 22 | ಮಂಡ್ಯ | 100403 | 43568 | 43.39 |
| 23 | ಮೈಸೂರು | 90628 | 37496 | 41.37 |
| 24 | ರಾಯಚೂರು | 48269 | 2743 | 5.68 |
| 25 | ರಾಮನಗರ | 29140 | 16594 | 56.95 |
| 26 | ಶಿವಮೊಗ್ಗ | 47530 | 13682 | 28.79 |
| 27 | ತುಮಕೂರು | 114650 | 81134 | 70.77 |
| 28 | ಉಡುಪಿ | 25077 | 4138 | 16.50 |
| 29 | ಉತ್ತರ ಕನ್ನಡ | 22960 | 2597 | 11.31 |
| 30 | ಯಾದಗಿರಿ | 52549 | 19061 | 36.27 |
| | ಒಟ್ಟು | **1650093** | **837980** | **50.41** |